**Code No. 18 Y**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ದ್ವಿತೀಯ ಪತ್ರಿಕೆ (ವಿಸ್ತರಿಸುವಿಕೆ)

ಜನವರಿ, 2016

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಕರ್ನಾಟಕ ರಾಜ್ಯ ಸರ್ಕಾರಿ ಕಛೇರಿಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಬೇಕೆಂದು ಸರ್ಕಾರವು ಹಲವಾರು ವರ್ಷಗಳಿಂದ ತಿಳುವಳಿಕೆ ಪತ್ರಗಳನ್ನು,
$\frac{1}{4}$ ಸುತ್ತೋಲೆಗಳನ್ನು,/ ನೆನಪೋಲೆಗಳನ್ನು ನೀಡಿದ್ದರೂ ಸಹ ಇನ್ನೂ ಹಲವಾರು ಕಛೇರಿಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಅಧಿಕಾರಿಗಳು ಮತ್ತು ಸಿಬ್ಬಂದಿ
$\frac{1}{2}$ ವರ್ಗದವರು ನಿರಾಸಕ್ತಿ ತೋರಿಸುತ್ತಿದ್ದಾರೆ./ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸುವಲ್ಲಿ ಏನಾದರೂ ಕುಂದು ಕೊರತೆಗಳಿದ್ದಲ್ಲಿ ಅಗತ್ಯ ಸಲಹೆಗಳನ್ನು ಪಡೆಯಬಹುದೆಂದೂ ತಿಳಿಸಲಾಗಿರುತ್ತದೆ.
ಆದರೂ ಸಹ/ ಸಂಪೂರ್ಣವಾಗಿ ರಾಜ್ಯಾದ್ಯಂತ $\frac{3}{4}$
ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸುವಲ್ಲಿ ವಿಫಲರಾಗಿದ್ದಾರೆ.

ಆದಕಾರಣ, ಈ ಸುತ್ತೋಲೆಯ ಮೂಲಕ ಮೂರು ತಿಂಗಳ ಗಡುವನ್ನು ನೀಡಲಾಗುತ್ತಿದೆ.X 1

[ Turn over

ವಿಫಲರಾದ ಅಧಿಕಾರಿಗಳು ಮತ್ತು ಸಿಬ್ಬಂದಿ
ವರ್ಗದವರ ಮೇಲೆ ಮುಂದಿನ ಸೂಕ್ತ
ಕ್ರಮಕೈಗೊಳ್ಳಲಾಗುವುದು.

ಮೇಲ್ಕಂಡ ವಿಷಯಗಳನ್ನು
ಒಳಗೊಂಡಂತೆ ಸರ್ಕಾರದ ಮುಖ್ಯ
ಕಾರ್ಯದರ್ಶಿಗಳ ಸಹಿಗಾಗಿ ಒಂದು
**ಸುತ್ತೋಲೆಯನ್ನು ಸಿದ್ಧಪಡಿಸಿ.**

(ಅಂಕಗಳು : 25)

$\frac{1}{4}$ ***ಪ್ರಶ್ನೆ ಎರಡು*/ :** ದಿನಾಂಕ ಇಪ್ಪತ್ತೆಂಟನೇ
ನವೆಂಬರ್ ಎರಡು ಸಾವಿರದ ಹದಿನೈದರಂದು
ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ
ವತಿಯಿಂದ ಶ್ರೀ ಕನಕದಾಸರ ಜಯಂತಿಯನ್ನು
$\frac{1}{2}$ ಆಚರಿಸಲಾಯಿತು./ ಉದ್ಘಾಟನಾ ಭಾಷಣ
ಮಾಡಿದ ರಾಜ್ಯದ ಮಾನ್ಯ
ಮುಖ್ಯಮಂತ್ರಿಯವರು ಶ್ರೀ ಕನಕದಾಸರು
ಸರ್ವಶ್ರೇಷ್ಠರು, ತಮ್ಮ ದಾಸವಾಣಿಗಳಿಂದ
$\frac{3}{4}$ ಕನ್ನಡಿಗರ ಮನ ಮಾತ್ರವಲ್ಲ,/ ಇಡೀ ವಿಶ್ವದ
ಜನ–ಮನಗಳನ್ನು ಗೆದ್ದಿದ್ದಾರೆ. ಅಂದಿನ
ಅಸ್ಪೃಶ್ಯತಾ ಕಾರಣದಿಂದಾಗಿ ಅವರಿಗೆ
ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಪ್ರವೇಶ
2 ದೊರೆಯದಿದ್ದ ಸಂದರ್ಭದಲ್ಲಿ ಅವರು ಭಕ್ತಿX
ಪರವಶರಾಗಿ ಭಗವಂತನನ್ನು ಸ್ತುತಿಸುವುದರ
ಮೂಲಕ ಭಗವಂತನು ಅವರ ಭಕ್ತಿಗೆ
ಮೆಚ್ಚಿ ತಾನೇ ವಿರುದ್ಧ ದಿಕ್ಕಿಗೆ ತಿರುಗಿ
ಕನಕದಾಸರಿಗೆ ತನ್ನ ದರುಶನವನ್ನು ನೀಡಿದ
ಸಂಗತಿ/ ಎಲ್ಲರಿಗೂ ತಿಳಿದಿದೆ. ಅಂತಹ $\frac{1}{4}$
ಮಹಾನುಭಾವರ ಜಯಂತಿಯನ್ನು ಪ್ರತಿ
ವರ್ಷವೂ ಆಚರಿಸುತ್ತಿರುವುದು ನಮಗೆ
ಹೆಮ್ಮೆಯ ವಿಷಯ ಎಂದು ಹೇಳಿದರು.

**ಪತ್ರಿಕಾ ವರದಿ ಸಿದ್ಧಪಡಿಸಿ.**

(ಅಂಕಗಳು : 20)

***ಪ್ರಶ್ನೆ ಮೂರು*/ :** ಕರ್ನಾಟಕ ರಾಜ್ಯ ಕಂದಾಯ $\frac{1}{2}$
ಇಲಾಖಾ ನೌಕರರ ಸಾಲ ಸಹಕಾರ
ಸಂಘ ನಿಯಮಿತ, ಕಂದಾಯ ಭವನ,
ಕೆಂಪೇಗೌಡ ರಸ್ತೆ, ಬೆಂಗಳೂರು, ಇದರ
ಕಾರ್ಯದರ್ಶಿಯವರು ದಿನಾಂಕ ಇಪ್ಪತ್ತನಾಲ್ಕು
ಸೆಪ್ಟೆಂಬರ್/ ಎರಡು ಸಾವಿರದ ಹದಿನೈದರಂದು $\frac{3}{4}$
ಸಂಘದ ಎರಡು ಸಾವಿರದ ಹದಿನಾಲ್ಕು–
ಹದಿನೈದನೇ ಸಾಲಿನ ಸರ್ವ ಸದಸ್ಯರ
ಸಭೆಯನ್ನು ಕರೆದಿರುತ್ತಾರೆ. ವಿಷಯಗಳು –
ಪ್ರರ್ಥನೆ, ಸ್ವಾಗತ, ಹಿಂದಿನX ಸಾಲಿನ 3
ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ
ದಾಖಲು ಮಾಡುವುದು, ಪ್ರಸ್ತುತ ಸಾಲಿನ
ಆಯ–ವ್ಯಯ ಪಟ್ಟಿಯ ಮಂಡನೆ, ಚರ್ಚೆ

ಮತ್ತು ಅನುಮೋದನೆ, ಮುಂದಿನ ಸಾಲಿಗೆ
$\frac{1}{4}$ ಲೆಕ್ಕ/ಪರಿಶೋಧಕರ ನೇಮಕ, ಮತ್ತು
ಸಭೆಯ ಅಧ್ಯಕ್ಷರ ಅನುಮತಿಯೊಂದಿಗೆ
ಇತರೆ ವಿಷಯಗಳ ಚರ್ಚೆ.

**ಸಭೆಯ ಸೂಚನಾ ಪತ್ರವನ್ನು ತಯಾರಿಸಿ.**

(ಅಂಕಗಳು : 20)

***ಪ್ರಶ್ನೆ ನಾಲ್ಕು :*** ಹಿಂದೂಸ್ತಾನ್ ಏರೋನಾಟಿಕ್ಸ್
$\frac{1}{2}$ ಲಿಮಿಟೆಡ್, ಹಳೇ/ ವಿಮಾನ ನಿಲ್ದಾಣ ರಸ್ತೆ,
ಬೆಂಗಳೂರು, ಇಲ್ಲಿ ಖಾಲಿ ಇರುವ
ಲೆಕ್ಕಾಧಿಕಾರಿಯ ಹುದ್ದೆಗಾಗಿ ಅರ್ಜಿಯನ್ನು
ಆಹ್ವಾನಿಸಿರುತ್ತಾರೆ. ವಿದ್ಯಾರ್ಹತೆ : ಯಾವುದೇ
$\frac{3}{4}$ ವಿಶ್ವವಿದ್ಯಾನಿಲಯದಿಂದ ಪದವಿ ಗಳಿಸಿರಬೇಕು,/
ಯಾವುದಾದರೂ ಕಂಪನಿಯಲ್ಲಿ ಲೆಕ್ಕ
ಶಾಖೆಯಲ್ಲಿ ಕನಿಷ್ಠ ಮೂರು ವರ್ಷಗಳ
ಅನುಭವ ಪಡೆದಿರಬೇಕು. ಅರ್ಜಿಯನ್ನು
ಸಲ್ಲಿಸಲು ಕೊನೆಯ ದಿನಾಂಕ–ಅಕ್ಟೋಬರ್
ಹದಿನೈದು.

4 ಮೇಲ್ಕಂಡ ವಿದ್ಯಾರ್ಹತೆಯೊಂದಿಗೆX
ವ್ಯವಸ್ಥಾಪಕರಿಗೆ ತಲುಪುವಂತೆ **ಅರ್ಜಿಯನ್ನು
ಸಿದ್ಧಪಡಿಸಿ.** (ಅಂಕಗಳು : 15)

***ಪ್ರಶ್ನೆ ಐದು :*** ಕರ್ನಾಟಕ ಸರ್ಕಾರದ
ವತಿಯಿಂದ ಎರಡು ಸಾವಿರದ ಹದಿನೈದರ
ಏಪ್ರಿಲ್ ಹದಿನಾಲ್ಕರಂದು ವಿಧಾನ ಸೌಧದ/ $\frac{1}{4}$
ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಂವಿಧಾನ ಶಿಲ್ಪಿ
ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು
ಆಚರಿಸಲಾಗುವುದು. ಸದರಿ ಸಮಾರಂಭದ
ಮುಖ್ಯ ಅತಿಥಿಗಳಾಗಿ ರಾಜ್ಯ ಸರ್ಕಾರದ
ಸನ್ಮಾನ್ಯ ಮುಖ್ಯಮಂತ್ರಿಯವರು/ $\frac{1}{2}$
ಆಗಮಿಸಲಿದ್ದಾರೆ. ಸಮಾರಂಭದ
ಅಧ್ಯಕ್ಷತೆಯನ್ನು ರಾಜ್ಯ ಸರ್ಕಾರದ ಸಮಾಜ
ಕಲ್ಯಾಣ ಇಲಾಖೆಯ ಸಚಿವರು ವಹಿಸಲಿದ್ದಾರೆ.
ವಿಶೇಷ ಅತಿಥಿಗಳಾಗಿ ವಿಧಾನ ಸಭೆಯ
ಅಧ್ಯಕ್ಷರು/ ಆಗಮಿಸಲಿದ್ದಾರೆ. $\frac{3}{4}$

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ
ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು
ಆಹ್ವಾನಿಸುವಂತೆ ಮೇಲ್ಕಂಡ ವಿಷಯಗಳನ್ನೊಳ
ಗೊಂಡ ಆಹ್ವಾನ ಪತ್ರಿಕೆಯನ್ನು ಸಿದ್ಧಪಡಿಸಿ.X 5

(ಅಂಕಗಳು : 20)